ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803

ಅಂತರ್ಜಾಲ: https://kptcl.karnataka.gov.in
ಮಿಂಚಂಚೆ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್) : ಯು40109ಕೆಎ1999ಎಸ್‌ಜಿ025521**
**(ಕಂಪನಿಯ ಅಧಿಕೃತ ಕಛೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009)**

**ಸಂಖ್ಯೆ: ಕವಿಪ್ರನಿನಿ/ಬಿ103/25303/2021-22** **ದಿನಾಂಕ :** 20 APR 2022

ಪ್ರಧಾನ ವ್ಯವಸ್ಥಾಪಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ),
ಕಂಪನಿ ಕಾರ್ಯಾಲಯ, ಸೆಸ್ಕ್,
ಮೈಸೂರು.

ಮಾನ್ಯರೆ,

**ವಿಷಯ :** ಮೃತ ನೌಕರರ ಅವಲಂಬಿತ ದತ್ತು ಪುತ್ರ/ಪುತ್ರಿಯರಿಗೆ ಅನುಕಂಪ ಆಧಾರದ ನೇಮಕಾತಿಗೆ ಪರಿಗಣಿಸುವ ವಿಷಯದಲ್ಲಿ ಸ್ಪಷ್ಟೀಕರಣ ಕೋರಿರುವ ಬಗ್ಗೆ

**ಉಲ್ಲೇಖ :** ತಮ್ಮ ಕಚೇರಿಯ ದಿನಾಂಕ: 19.01.2022, ಪತ್ರ ಸಂಖ್ಯೆ: 18036-37.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದ ಪತ್ರದಲ್ಲಿನ ವಿಷಯವನ್ನು ಪರಿಶೀಲಿಸಲಾಯಿತು. ದಿನಾಂಕ 09.04.2021 ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ಸಿವಿಲ್ ಸೇವಾ (ಅನುಕಂಪ ಆಧಾರದ ಮೇಲೆ ನೇಮಕಾತಿ) ನಿಯಮಗಳು, 1996 ಕ್ಕೆ ಕೆಲವು ತಿದ್ದುಪಡಿಗಳನ್ನು ಮಾಡಲಾಗಿರುತ್ತದೆ. ಸದರಿ ಆದೇಶದಲ್ಲಿ ಮೃತ ನೌಕರರ ಅವಲಂಬಿತ ದತ್ತು ಪುತ್ರ/ಪುತ್ರಿಯರನ್ನು ಅನುಕಂಪ ಆಧಾರದ ನೇಮಕಾತಿಗೆ ಪರಿಗಣಿಸಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ. ಸದರಿ ಸರ್ಕಾರಿ ಆದೇಶದ ಆಧಾರದ ಮೇಲೆ ಕವಿಪ್ರನಿನಿ ನೌಕರರ ಭರ್ತಿ (ಅನುಕಂಪದ ಆಧಾರದ ನೇಮಕಾತಿ) ನಿಬಂಧನೆಗಳು 1997 ಕ್ಕೆ ದಿನಾಂಕ: 08.11.2021 ರ ಆದೇಶದಲ್ಲಿ ಸೂಕ್ತ ತಿದ್ದುಪಡಿಗಳನ್ನು ಮಾಡಲಾಗಿರುತ್ತದೆ.

ದಿವಂಗತ ನೌಕರರ ದತ್ತು ಪುತ್ರ/ಪುತ್ರಿಯರಿಗೆ ಅನುಕಂಪ ಆಧಾರದ ನೇಮಕಾತಿಗೆ ಪರಿಗಣಿಸುವ ವಿಷಯದಲ್ಲಿ ಪಾಲಿಸಬೇಕಾದ ವಿಧಿವಿಧಾನಗಳ ಬಗ್ಗೆ ಸರ್ಕಾರದಿಂದ ಅಧಿಕೃತವಾಗಿ ಯಾವುದೇ ಮಾರ್ಗಸೂಚಿಗಳನ್ನು ಜಾರಿಗೊಳಿಸಿರುವುದಿಲ್ಲ. ಆದಾಗ್ಯೂ, ದತ್ತು ಪುತ್ರ/ಪುತ್ರಿಯನ್ನು ಕಾನೂನುಬದ್ಧವಾಗಿ ಹಾಗೂ ದತ್ತು ನಿಬಂಧನೆಗಳ ಅನುಸಾರ ದತ್ತು ಪಡೆದುಕೊಂಡಿರುವುದಕ್ಕೆ ಪೂರಕ ದಾಖಲೆಗಳನ್ನು ಅಭ್ಯರ್ಥಿಯಿಂದ ಪಡೆದು, ಸದರಿ ದಾಖಲೆಗಳನ್ನು ತಮ್ಮ ಕಂಪನಿಯ ಕಾನೂನು ಸಲಹೆಗಾರರು ಅಥವಾ ಕಾನೂನು ಶಾಖೆಯಿಂದ ಪರಿಶೀಲಿಸಿ, ಕಾನೂನಾತ್ಮಕವಾಗಿ ದತ್ತು ಪಡೆದುಕೊಂಡಿರುವ ಕುರಿತು ದೃಢೀಕರಿಸಿಕೊಂಡ ನಂತರ ಹಾಗೂ ಅನುಕಂಪ ಆಧಾರದ ನೇಮಕಾತಿ ನಿಯಮಾವಳಿಗಳ ಇತರೆ ಎಲ್ಲಾ ಷರತ್ತುಗಳನ್ನು ಅಭ್ಯರ್ಥಿಯು ಪೂರೈಸಿದ್ದಲ್ಲಿ ಮಾತ್ರ ಅನುಕಂಪ ಆಧಾರದ ನೇಮಕಾತಿಗೆ ಪರಿಗಣಿಸಲು ಕ್ರಮಕೈಗೊಳ್ಳಬಹುದಾಗಿರುತ್ತದೆ ಎಂದು ಈ ಮೂಲಕ ಸ್ಪಷ್ಟೀಕರಿಸಲಾಗಿದೆ.

ತಮ್ಮ ವಿಶ್ವಾಸಿ,

**ನಿರ್ದೇಶಕರು**
**(ಆಡಳಿತ ಮತ್ತು ಮಾನವ ಸಂಪನ್ಮೂಲ)**

**ಪ್ರತಿಯನ್ನು ಮಾಹಿತಿಗಾಗಿ :**

ಪ್ರಧಾನ ವ್ಯವಸ್ಥಾಪಕರು(ಆಡಳಿತ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ), ಬೆಸ್ಕಾಂ-ಬೆಂಗಳೂರು, ಹೆಸ್ಕಾಂ-ಹುಬ್ಬಳ್ಳಿ, ಮೆಸ್ಕಾಂ-ಮಂಗಳೂರು, ಜೆಸ್ಕಾಂ-ಕಲಬುರಗಿ.